ಸಳಿಗೆ ಮಧವಿ ಸಲ್ಲಿಸಿದ್ದಾರೆ. ಆದರೆ ಅವರ ಮನವಿಗಳು ಮಂತ್ರಿಗಳಿಗೆ ಮುಟ್ಟಿದೆಯೋ ಏನೋ ಗೊತ್ತಿಲ್ಲ. 65 ದಿವಸಗಳಿಂದಲೂ ನೀವು ಅವರನ್ನು ಮಾತನಾಡಿಸಿಲ್ಲ ಅಂದರೆ ನೀವು ಯಾವರೀತಿ ಪ್ರಜಾ ಪ್ರಭುತ್ವದ ಸರ್ಕಾರ ನಡೆಸುತ್ತಿದ್ದೀರಿ ಎಂಬುದು ಗೊತ್ತಾಗುತ್ತದೆ. ನಿಮಗೆ ಬಡವರ ಬಗ್ಗೆ ಆಸಕ್ತಿ ಇದೆಯೆ ಎಂದು ಕೇಳಬೇಕಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ತಕ್ಷಣ ಸತ್ಯಾಗ್ರಹ ಮಾಡುತ್ತಿರುವ ಸ್ಥಳಕ್ಕೆ ಒಬ್ಬರು ರೆವಿನ್ಯೂ ಅಧಿಕಾರಿಗಳನ್ನು ಕಳುಹಿಸಿ ಅವರ ತೊಂದರೆ ಏನೆಂಬುದರ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಕಾನೂನು ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(VII) ಮಡಿಕೇರಿಯಲ್ಲಿ ವಿದ್ಯಾರ್ಥಿಗಳಿಗೆ ಪಾಠಪ್ರವಚನ ಮತ್ತು ಇತರ ಸೌಕರ್ಯಗಳ ಒದಗಿಸುವಿಕೆ

ಶ್ರೀ ಎಂ. ಎಂ. ನಾನಯ್ಯ.—ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿರತಕ್ಕ ಆರ್ಟ್ಸ್ ಮತ್ತು ಸೌನ್ಸ್ ಕಾಲೇಜಿನಲ್ಲಿ .....

ಅಧ್ಯಕ್ಷರು.—ಒಂದೊಂದು ದಿವಸ ಒಂದೊಂದು ಕಾಲೇಜು ವಿಷಯ ಹೇಳುತ್ತಿದ್ದೀರಿ ಹೀಗಾದರೆ ಹೇಗೆ ?

ಶ್ರೀ ಎಂ. ಎಂ. ನಾನಯ್ಯ.—ನಾನು ಹೊದಲು ಹೇಳಿದ ಕಾಲೇಜು ನಾಪೋಕ್ಲು ವಿನಲ್ಲಿದೆ. ಈಗ ಹೇಳುತ್ತಿರುವುದು ಮಡಿಕೇರಿಯಲ್ಲಿರತಕ್ಕ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ಬಗ್ಗೆ ಅಲ್ಲಿ ಏನಾಗಿದೆ ಅಂದರೆ ಆ ಕಾಲೇಜಿನಲ್ಲಿ ಪ್ರೊಫೆಸರ್‌ಗಳು ಅಲ್ಲಿ ರೀಡರ್ಸ್‌ಗಳು ಹಾಗೂ ಲೆಕ್ಚರರ್‌ಗಳು ಇಲ್ಲ ಈಗ ಇರತಕ್ಕ ಲೆಕ್ಚರರ್‌ಗಳು 14 ಜನ ಆದರೆ ಅವರೆಲ್ಲರೂ ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಪಾಠಪ್ರವಚನ ಸರಿಯಾಗಿಆಗುತ್ತಿಲ್ಲ ವಿದ್ಯಾರ್ಥಿಗಳು ಕುಳಿತುಕೊಳ್ಳುವುದಕ್ಕೆ ಸರಿಯಾದ ಪೀಠೋಪಕರಣಗಳು ಇಲ್ಲ ಇದು ಎಲ್ಲಿಯವರೆಗೂ ಹೋಗಿದೆ. ಅಂದರೆವಿ ದ್ಯಾರ್ಥಿಗಳು ಪ್ರಿನ್ಸಿಪಾಲರನ್ನು ಹಿಡಿದು ಕೊಂಡು ಹೊಡೆಯುವ ಎಳೆಂಟು ಜನ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಹೊರಗೆ ಹಾಕಿದ್ದಾರೆ. ಪ್ರಿನ್ಸಿಪಾಲರು ಅಲ್ಲಿರತಕ್ಕ ಪರಿಸ್ಥಿತಿಯ ಬಗ್ಗೆ ಫೋಟೋ ತೆಗೆದು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಸರ್ಕಾರ ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಶಿಕ್ಷಣ ಸಚಿವರು ತುರ್ತುಕ್ರಮ ತೆಗೆದು ಕೊಂಡು ವಿದ್ಯಾರ್ಥಿಗಳಿಗೆ ಸರಿಯಾದ ರೀತಿಯಲ್ಲಿ ಪಾಠಪ್ರವಚನಗಳು ಸಿಗುವಂತೆ ಜೊತೆಗೆ ಪೀಠೋಪಕರಣಗಳನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಧ್ಯಕ್ಷರೆ, ಲೆಕ್ಚರರ್ ಪೋಸ್ಟ್‌ಗಳಿಗೆ ಡೈರೆಕ್ಟ್ ಆಗಿ ರಿಕ್ರೂಟ್ ಮಾಡುವಹಾಗೆ ಇಲ್ಲ. ಲೋಕಸೇವಾ ಆಯೋಗದವರು ನೇಮಕ ಮಾಡುವಂತೆ ಕೇಳಿದ್ದೇವೆ. ಅವರು ಈ ತಿಂಗಳ ಕೊನೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಕಳುಹಿಸಿಕೊಡಬಹುದು. ಆಗ ಎಲ್ಲಾ ಕಡೆಗೂ ಲೆಕ್ಚರರ್ ಪೋಸ್ಟ್‌ಗಳನ್ನು ನೇಮಕ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿದ್ದ ಪ್ರೊಫೆಸರ್ ರವರನ್ನು ವರ್ಗಮಾಡಬೇಕಾಗಿ ಬಂತು ಮಾನ್ಯಸದಸ್ಯರು ಯಾರ ಹೆಸರನ್ನಾದರೂ ಕೊಟ್ಟರೆ, ನಾವು ಅವರನ್ನು ಅಲ್ಲಿಗೆ ಪೋಸ್ಟಿಂಗ್ ಮಾಡುತ್ತೇವೆ ಕೊಡಗಿಗೆ ಯಾರೂ ಕೂಡ ಹೋಗುವುದಕ್ಕೆ ಇಷ್ಟಪಡುವುದಿಲ್ಲ ಎಲ್ಲರೂ ಕೂಡ ಬೆಂಗಳೂರು ಮೈಸೂರು ಬೇಕೆಂದು ಕೇಳುತ್ತಾರೆ. ಮಾನ್ಯಸದಸ್ಯರ ಕಡೆಯವರು ಯಾರಾದರೂ ಇದ್ದರೆ, ದಯವಿಟ್ಟು ತಿಳಿಸಬೇಕು. ನಾವು ಅವರನ್ನು ನೇಮಕ ಮಾಡಲಾಗುವುದು.

ಶ್ರೀ ಕೆ. ಶಿವಮೂರ್ತಿ.—ದಿವಂಗತ ದೇವರಾಜ್ ಅರಸ್‌ರವರ ಪ್ರತಿಮೆಯನ್ನು ವಿಧಾನಸೌಧದ ಮುಂದೆ ಸ್ಥಾಪನೆ ಮಾಡುವ ಬಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಆದರೆ ಆ ಬಗ್ಗೆ ಇನ್ನೂ ಉತ್ತರ ನೀಡಿಲ್ಲ.

Announcement

Mr. Speaker.—I have received the following Message from the Chairman, Legislative Council.

I send herwith the Karnataka Advocates' Welfare Fund Bill 1983 which has been agreed to by the Legislative Council on 23rd February 1984 without amendments.

I have also received the following Message from the Chairman Legislative Council.